**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 91/2020**

**ಚಾ.ಸಾಃ1, ಫ್ರಾ.ಸಾಃ2**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಮತಿ ಕುಸುಮಾ ನಾಯ್ಕ |
| ತಂದೆಯ ಹೆಸರು | ಸುರೇಶ ನಾಯ್ಕ |
| ವಯಸ್ಸು | 54 ವರ್ಷಗಳು |
| ಉದ್ಯೋಗ | ಬಿಸಿಊಟ ಅಡುಗೆ ಕೆಲಸ |
| ವಾಸ್ತವ್ಯ | ಜಡ್ಡಿಗದ್ದೆ, ಕಡತೋಕಾ, ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 19-08-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನನ್ನ ವಾಸದ ಮನೆಯು ಜಿಡ್ಡಿಗದ್ದೆ ಕ್ರಾಸನಲ್ಲಿ ಇರುತ್ತದೆ. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಗಂಡನಾದ ಚಾಸಾ-10 ಸುರೇಶ ನಾರಾಯಣ ನಾಯ್ಕ ವಾಸ ಮಾಡುತ್ತಿದ್ದೇವೆ. ನನ್ನ ಮಗಳಾದ ಜಯಶ್ರೀಯು ಶುಶ್ರುಷಕಿಯಾಗಿದ್ದು ಆಕೆ ದಾವಣಗೆರೆಯಲ್ಲಿ ಕೆಲಸ ಮಾಡುತ್ತಿದ್ದಾಳೆ.

ದಿನಾಂಕ 29-05-2019 ರಂದು ಬೆಳಿಗ್ಗೆ 09-30 ರ ಸಮಯದಲ್ಲಿ ಬಿಸಿ ಊಟದ ಅಡುಗೆ ಮಾಡಲು ಜಡ್ಡಿಗದ್ದೆಯಲ್ಲಿರುವ ಕನ್ನಡ ಪ್ರಾಥಮಿಕ ಶಾಲೆಗೆ ಹೋಗಿದ್ದೆ. ನನ್ನ ಗಂಡ ನನ್ನ ತಾಯಿಯ ಮನೆಗೆ ಕೂಲಿ ಕೆಲಸಕ್ಕೆ ಹೋಗಿದ್ದರು. ಕೆಲಸಕ್ಕೆ ಹೋಗುವ ಮೊದಲು ನಾನು ಮತ್ತು ನನ್ನ ಗಂಡ ಇಬ್ಬರೂ ಸೇರಿ ಮನೆಯ ಬಾಗಿಲನ್ನು ಮುಚ್ಚಿ ಮನೆಯ ಮುಂದಿನ ಬಾಗಿಲಿನ ಬಳಿ ಹಾಕಿದ್ದ ಗ್ರೀಲ್ ಗೆ ಬೀಗವನ್ನು ಹಾಕಿದ್ದರು. ಸದರಿ ದಿನ ರಾತ್ರಿ ನಾನು ಸಹ ನನ್ನ ತವರು ಮನೆಗೆ ಹೋಗಿದ್ದೆ. ದಿನಾಂಕ 30-05-2019 ರಂದು ನಾನು ಮತ್ತು ನನ್ನ ಗಂಡ ನಮ್ಮ ಮನೆಗೆ ಬೆಳಿಗ್ಗೆ 09-30 ರ ಸಮಯಕ್ಕೆ ಬಂದು ನೋಡಲಾಗಿ ಗ್ರೀಲ್ ಗೆ ಹಾಕಿದ್ದ ಬೀಗದ ತಟ್ಟೆ ಇರಲಿಲ್ಲ. ನಾವು ಮನೆಯೊಳಗೆ ಹೋಗಿ ನೋಡಲಾಗಿ ಮಲಗುವ ಕೋಣೆಯಲ್ಲಿ ಇದ್ದ ಕಪಾಟು ತೆರೆದಿತ್ತು. ಸದರಿ ಕಪಾಟಿನೊಳಗೆ ಮತ್ತೊಂದು ಸಣ್ಣ ಕಪಾಟು ಇದ್ದು ಅದರಲ್ಲಿ ಒಂದು ಸಣ್ಣ ಪರ್ಸನ್ನು ಇಟ್ಟಿದ್ದೆ. ಸದರಿ ಸಣ್ಣ ಪರ್ಸನಲ್ಲಿ ಒಂದು ಬಂಗಾರದ ನಕ್ಲೇಶ್, ಒಂದು ಬಂಗಾರದ ಕರಿಮಣಿ ಸರ, ಲಾಕೇಟು ಇದ್ದ ಒಂದು ಬಂಗಾರದ ಚೈನು, ಎರಡು ಬಂಗಾರದ ಕೈ-ಬೆರಳು ಉಂಗುರಗಳು, ಕಿವಿಗೆ ಹಾಕುವ ಒಂದು ಜೊತೆ ಜುಮುಕಿ, ಕುಡುಕು ಮತ್ತು ಸರಪಳಿ ಮತ್ತು ರೂ.1,000/- ನಗದನ್ನು ಇಟ್ಟಿದ್ದೆ. ಆದರೆ ಅವುಗಳು ಇರಲಿಲ್ಲ. ಅವುಗಳನ್ನು ಯಾರೋ ಕಳ್ಳತನ ಮಾಡಿರುವುದಾಗಿ ನನಗೆ ಕಂಡು ಬಂದಿರುತ್ತದೆ. ಸದರಿ ವಿಚಾರವನ್ನು ನಾನು ಅದೇ ದಿನ ಪೋಲಿಸರು ತಿಳಿಸಿ ಪಿರ್ಯಾದನ್ನು ನೀಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಿರ್ಯಾದನ್ನು ಗುರುತಿಸಿದ್ದರಿಂದ ಅದನ್ನು ನಿಪಿ-5 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೋಲಿಸರು ನಮ್ಮ ಮನೆಯ ಬಳಿ ಬಂದು ಪಂಚನಾಮೆ ಮಾಡಿ ಛಾಯಚಿತ್ರ ತೆಗೆದು ನಕಾಶೆಯನ್ನು ಬಿಡಿಸಿರುತ್ತಾರೆ. ಆ ಸಂದರ್ಭದಲ್ಲಿ ನಾನು, ಚಾಸಾ-2 ಮತ್ತು 3 ಹಾಜರಿದ್ದೇವು.

ಪೋಲಿಸರಿಗೆ ಸ್ಥಳವನ್ನು ನಾನೇ ತೋರಿಸುತ್ತೇನೆ. ಪಂಚನಾಮೆ, ನಕಾಶೆ ಮತ್ತು ಛಾಯಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-1 ರಿಂದ 4ನ್ನು ಗುರುತಿಸಿದ್ದು ನಿಪಿ-1 ಮತ್ತು 2ರ ಮೇಲಿನ ಸಾಕ್ಷಿ ಸಹಿಗಳನ್ನು ಕ್ರಮವಾಗಿ ನಿಪಿ-1(ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು.

ದಿನಾಂಕ 04-08-2020ರಂದು ಪೋಲಿಸರು ಕಳ್ಳರನ್ನು ನಮ್ಮ ಮನೆಯ ಬಳಿ ಕರೆತಂದಿದ್ದರು. ಅವರನ್ನು ನೋಡಿದರೆ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳನ್ನು ಗುರುತಿಸಿರುತ್ತಾರೆ.

ದಿನಾಂಕ 05-08-2020ರಂದು ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿ ಬಂಗಾರವನ್ನು ತೋರಿಸುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಪೋಲಿಸರು ನಮ್ಮ ಮರು ಹೇಳಿಕೆಯನ್ನು ಪಡೆದಿರುತ್ತಾರೆ. ಪೋಲಿಸರು ಠಾಣೆಯಲ್ಲಿ 1. ಒಂದು ಬಂಗಾರದ ನಕ್ಲೇಶ್, 2. ಒಂದು ಬಂಗಾರದ ಕರಿಮಣಿ ಸರ, 3.ಲಾಕೇಟು ಇದ್ದ ಒಂದು ಬಂಗಾರದ ಚೈನು, 4.ಎರಡು ಬಂಗಾರದ ಕೈ-ಬೆರಳು ಉಂಗುರಗಳು, 5.ಕಿವಿಗೆ ಹಾಕುವ ಒಂದು ಜೊತೆ ಜುಮುಕಿ, ಕುಡುಕು ಮತ್ತು ಸರಪಳಿಯನ್ನು ತೋರಿಸಿದ್ದರು. ಅವುಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಮೇಲೆ ಹೇಳಿದ ಎಲ್ಲಾ ಆಭರಣಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದು ಅವುಗಳನ್ನು ಸಾಕ್ಷಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮುಮಾ-1 ರಿಂದ 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಪಿರ್ಯಾದನ್ನು ನಾನೇ ಬರೆದು ಪೋಲಿಸರಿಗೆ ನೀಡಿರುತ್ತೇನೆ. ಬಂಗಾರದ ಆಭರಣಗಳನ್ನು ನಾನೇ ಕಡತೋಕ ಶೆಟ್ಟರ ಬಳಿ ಮಾಡಿಸಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ಸದರಿ ಶೆಟ್ಟರು ಪಾವತಿಯನ್ನು ನೀಡಿರುತ್ತಾರೆ. ಸದರಿ ಪಾವತಿಗಳನ್ನು ಪೋಲಿಸರಿಗೆ ನೀಡಿರುತ್ತೇನೆ. ಮುಮಾ-5 ಕಿವಿಯೋಲೆ, ಕುಡುಕು ಮತ್ತು ಸರಪಳಿಯನ್ನು ಕಡತೋಕ ಶೆಟ್ಟರ ಬಳಿ ಮಾಡಿಸಿರುತ್ತೇನೆ. ಅವುಗಳ ಒಟ್ಟೂ ಅಂದಾಜು ತೂಕ 8 ಗ್ರಾಂ ಇರಬಹುದು. ಅವುಗಳನ್ನು 2016 ಅಥವಾ 2017 ನೇ ಸಾಲಿನಲ್ಲಿ ಮಾಡಿಸಿರುತ್ತೇನೆ.

ಪಿರ್ಯಾದನ್ನು ನೀಡುವ ಸಂದರ್ಭದಲ್ಲಿ ನನ್ನ ಗಂಡ ಸಹ ನನ್ನ ಜೊತೆ ಬಂದಿದ್ದ. ನಾವು ಪಿರ್ಯಾದು ನೀಡಲು ಬಂದಾಗ ಮನೆಯ ಬಳಿ ನನ್ನ ಅಕ್ಕಪಕ್ಕದವರು ಮತ್ತು ನನ್ನ ಅಕ್ಕತಂಗಿಯರು ಇದ್ದರು.

ಪಂಚನಾಮೆಯನ್ನು ನಾನು ದಿನಾಂಕ 30-05-2019ರಂದು ಬೆಳಿಗ್ಗೆ 11-00 ಗಂಟೆಯ ನಂತರ ಮಾಡಿರುತ್ತಾರೆ. ಚಾಸಾ-3 ಮಾರುತಿ ನಾಯ್ಕ ನನ್ನ ಅಕ್ಕನ ಮಗ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಪೋಲಿಸರು ಯಾವುದೇ ವಸ್ತುಗಳನ್ನು ತಂದಿರುವುದಿಲ್ಲ. ದಿನಾಂಕ 30-05-2019ರ ನಂತರ ನಾನು ಪೋಲಿಸ್ ಠಾಣೆಗೆ ಬಂದಿರುತ್ತೇನೆ. ಎಷ್ಟು ದಿನಗಳ ನಂತರ ಠಾಣೆಗೆ ಹೋಗಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೌನವಾಗಿ ಉತ್ತರಿಸುತ್ತಾರೆ. ಪಿರ್ಯಾದು ನೀಡಿದ ನಂತರ ಎಷ್ಟು ಬಾರಿ ಠಾಣೆಗೆ ಬಂದಿದ್ದೆ ಎನ್ನುವುದನ್ನು ಹೇಳಾಗಾವುದಿಲ್ಲ. ಪಿರ್ಯಾದು ನೀಡಿದ ನಂತರ ಪೋಲಿಸರು ನನ್ನ ಹೇಳಿಕೆ ಪಡೆದಿರುವುದಿಲ್ಲ. ಮುಮಾ-5 ಬಂಗಾರದ ಕಿವಿಯೋಲೆ, ಕುಡುಕು ಮತ್ತು ಸರಪಳಿ ನನ್ನ ಆಭರಣಗಳಲ್ಲ ಎಂದರೆ ಸರಿಯಲ್ಲ. ಮುಮಾ-5 ಆರೋಪಿಗಳ ಸಹೋದರಿಯಾದ ನಿಹಾರವರ ಆಭರಣ ಎಂದರೆ ಸರಿಯಲ್ಲ. ಆರೋಪಿಗಳನ್ನು ಪೋಲಿಸರು ನಮ್ಮ ಮನೆಯ ಬಳಿ ಕರೆತಂದಿರಲಿಲ್ಲ ಎಂದರೆ ಸರಿಯಲ್ಲ.

ಆರೋಪಿಗಳನ್ನು ಪೋಲಿಸರು ನಮ್ಮ ಮನೆಯ ಬಳಿ ಕರೆತಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 05-08-2020 ರಂದು ಪೋಲಿಸರ ಮುಂದೆ ಹೆಚ್ಚುವರಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**